ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 117/2019

..............................................................

CW 04
PW 04

| | | |
|---|---|---|
| ಹೆಸರು | : | ಪಾಂಡುರಂಗ ಪೈ |
| ತಂದೆಯ ಹೆಸರು | : | ಕೇಶವ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ |
| ವಾಸಸ್ಥಳ | : | ಧಾರವಾಡ. |

ದಿನಾಂಕ 09-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು ದಿನಾಂಕ 10-09-2008 ರಿಂದ 31-07-2009 ರ ವರೆಗೆ ಕುಳಗಿ ವನ್ಯ ಜೀವಿ ವಲಯದಲ್ಲಿ ವಲಯ ಅರಣ್ಯಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 29-04-2009 ರಂದು ಮದ್ಯಾಹ್ನ 01-30 ಗಂಟೆಗೆ ನಾನು ಕಚೇರಿಯಲ್ಲಿ ಕರ್ತವ್ಯದಲ್ಲಿ ಇದ್ದಾಗ ನನಗೆ ಅಮಗಾ ಮತ್ತು ಜಮಗಾ ಗ್ರಾಮದ ಗೌಳಿವಾಡದ ಗೌಳಿ ಜನರು ಪಕ್ಕದ ನಾಗಝರಿ ಕೊಳ್ಳದ ಅರಣ್ಯ ಪ್ರದೇಶದಲ್ಲಿ ಭೇಟೆಯಾಡುವ ಸಲುವಾಗಿ ತಮ್ಮ ನಾಯಿಗಳೊಂದಿಗೆ ತೆರಳಿರುತ್ತಾರೆ ಎಂದು ಖಚಿತವಾದ ಭಾತ್ಮಿ ಬಂದಿರುತ್ತದೆ. ನಾನು ಚಾಸಾ 5 ರವರನ್ನು ಸಂಪರ್ಕಿಸಿ ನನ್ನ ಕಚೇರಿಗೆ ಕರೆಯಿಸಿ ಸದರಿ ಭಾತ್ಮಿಯನ್ನು ತಿಳಿಸಿ, ಸದರಿ ಜಾಗಕ್ಕೆ ಬಂದು ಕಾನೂನು ಕ್ರಮ ಜರುಗಿಸಲು ಕೋರಿರುತ್ತೇನೆ. ಅದರಂತೆ ರಾತ್ರಿ 08-00 ಗಂಟೆಯ ಸಮಯದಲ್ಲಿ ನಾನು ಕಚೇರಿಯಲ್ಲಿಕೆಲಸ ನಿರ್ವಹಿಸುತ್ತಿರುವಾಗ ಚಾಸಾ 5 ರವರು ಇಬ್ಬರು ಆರೋಪಿತರನ್ನು ಮತ್ತು ಜೀವಂತ ಉಡ, ಒಂದು ಕೊಡಲಿ ಹಾಗೂ ಟವೆಲ್ ಅನ್ನು ಜಪ್ತುಪಡಿಸಿಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ಸದರಿ ಪ್ರಕರಣವು ವನ್ಯ ಜೀವಿ ಕಾಯಿದೆಯ ವ್ಯಾಪ್ತಿಯಲ್ಲಿ ಬರುವುದರಿಂದ ಚಾಸಾ 1 ರವರ ಮುಂದೆ ಹಾಜರುಪಡಿಸಲು ಚಾಸಾ 5 ರವರಿಗೆ ತಿಳಿಸಿರುತ್ತೇನೆ. ಈ ವಿಚಾರವಾಗಿ ನಾನು ಚಾಸಾ 1 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ನನ್ನ ಸಮಕ್ಷಮ ಹಾಜರುಪಡಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ

ನ್ಯಾಯಾಲಯದಲ್ಲಿ ಗೈರು ಹಾಜರು  ಇರುವುದರಿಂದ ಅವರನ್ನು ಗುರುತಿಸಲು ಅವರ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಜಪ್ತುಪಡಿಸಿಕೊಂಡ ಒಂದು ಕೊಡಲಿ ಹಾಗೂ ಟವೆಲ್ ಅನ್ನು  ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು :**  ಆರೋಪಿ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ1 ರಿಂದ 3 ರವರು  ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸಾ  5 ರಿಂದ 7 ರವರು  ನಮ್ಮ ಇಲಾಖಾ ಸಿಬ್ಬಂದಿಯವರು ಎಂದರೆ ಸರಿ. ನಮ್ಮ  ವಲಯ ಕಚೇರಿ ಕುಳಗಿಯಲ್ಲಿ ಇದೆ. ನನಗೆ ಭಾತ್ಮಿ ಬಂದಾಗ ನಾನು ಕಚೇರಿಯಲ್ಲಿ ಇದ್ದೆ.  ಆಗ ಚಾಸಾ 5 ರವರು ಜಮಗಾ ಕ್ಷೇತ್ರದಲ್ಲಿ ಇದ್ದರು. ಜಮಗಾ ಗೌಳಿವಾಡದಿಂದ ನಾಗಝರಿ ಕೊಳ್ಳ 2-3 ಕಿ.ಮೀ ಆಗುತ್ತದೆ ಎನ್ನುತ್ತಾರೆ. ನಾನು ಘಟನಾ ಜಾಗಕ್ಕೆ ಹೋಗಿಲ್ಲ. ನಮಗೆ ಇಲಾಖಾ ವಾಹನ ಇತ್ತು. ಭಾತ್ಮಿ ಬಂದಾಗ ನೀವೆ ಘಟನಾ ಜಾಗಕ್ಕೆ ಹೋಗಲು ತೊಂದರೆ  ಇರಲಿಲ್ಲ ಎಂದರೆ ಸಾಕ್ಷಿ  ನನಗೆ ಕಚೇರಿ ಕೆಲಸ ಇದ್ದರಿಂದ ಅವರಿಗೆ  ಹೇಳಿದ್ದೆ ಎನ್ನುತ್ತಾರೆ. ಘಟನಾ ಜಾಗದ ಪರಿಶೀಲನೆಯನ್ನು ನಾನು ಮಾಡಿಲ್ಲ. ಘಟನಾ ಜಾಗದ ಪರಿಶೀಲನೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ  ನನಗೆ ಕಚೇರಿ ಕೆಲಸ ಇದ್ದರಿಂದ ಅವರಿಗೆ ಹೇಳಿದ್ದೆ ಎನ್ನುತ್ತಾರೆ. ಜಪ್ತು ಪಂಚನಾಮೆಯನ್ನು ನೀವು ಪರಿಶೀಲನೆ  ಮಾಡಿದ್ದೀರಾ ಎಂದರೆ ಸಾಕ್ಷಿ ಪರಿಶೀಲನೆ ಮಾಡಿ, ವಸ್ತುಗಳು ಇವೆ ಎಂದು ಖಾತರಿ ಪಡಿಸಿಕೊಂಡಿರುತ್ತೇನೆ. ಜಪ್ತು ಪಂಚನಾಮೆಗೆ ನಾನು ಸಹಿ ಮಾಡಿಲ್ಲ. ಆರೋಪಿತರನ್ನು ಮತ್ತು ಜಪ್ತುಪಡಿಸಿಕೊಂಡ ವಸ್ತುಗಳನ್ನು ಚಾಸಾ 1 ರವರ ಮುಂದೆ ಹಾಜರುಪಡಿಸಲು ಮೌಖಿಕವಾಗಿ ಸಿಬ್ಬಂದಿಯವರಿಗೆ ತಿಳಿಸಿದ್ದೇನೆ. ಚಾಸಾ 5 ರವರು ಯಾವುದೇ ಪಂಚನಾಮೆಯನ್ನು ನಿಮ್ಮ ಮುಂದೆ ಹಾಜರುಪಡಿಸಿಲ್ಲ, ನೀವು ಮೌಖಿಕವಾಗಿ ಆದೇಶ ಮಾಡಿಲ್ಲ, ಚಾಸಾ 1  ರವರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ನೀಡಿದ ದೂರಿಗೆ ಅನುಕೂಲ ಆಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮು.ಮಾ. ಗಳನ್ನು ಪರಿಶೀಲನೆ ಮಾಡಿಲ್ಲ, ಆರೋಪಿ 1 ರವರು ಯಾವುದೇ ತಪ್ಪು ಮಾಡಿಲ್ಲ  ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.